**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.2714/2021**

ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು ಃ ಸತ್ಯನಾರಾಯಣ
ತಂದೆಯ ಹೆಸರುಃ ಃ ಚೆನ್ನದಾಸಪ್ಪ
ವಯಸ್ಸು ಃ **56 ವರ್ಷ**
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಕೆಸರುಕೊಪ್ಪ

**ದಿನಾಂಕ: 06-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಮೃತ ಕೃಷ್ಣಮೂರ್ತಿ ನನ್ನ ಅಣ್ಣ. ಸುಮಾರು 3-4 ವರ್ಷಗಳ ಹಿಂದೆ ಲಕ್ಕವಳ್ಳಿಯ ರಂಗೇನಹಳ್ಳಿ ಮುಡುಗೋಡು ಕೆರೆ ಹತ್ತಿರ ಮೃತ ಕೃಷ್ಣಮೂರ್ತಿಯವರು ತಮ್ಮ ಟಿ ವಿ ಎಸ್ ವಾಹನದಲ್ಲಿ ಕೆಸರುಕೊಪ್ಪದಿಂದ ರಂಗೇನಹಳ್ಳಿಗೆ ಹೋಗುತ್ತಿರುವಾಗ ರಂಗೇನಹಳ್ಳಿ ಕಡೆಯಿಂದ ಬರುತ್ತಿದ್ದ ಖಾಸಗಿ ವಾಹನ ಕೃಷ್ಣ ಬಸ್ ವೇಗವಾಗಿ ಬಂದು ಕೃಷ್ಣಮೂರ್ತಿಯವರು ಚಲಾಯಿಸುತ್ತಿದ್ದ ಟಿ ವಿ ಎಸ್ ವಾಹನಕ್ಕೆ ಎದುರುಗಡೆಯಿಂದ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದ ಪರಿಣಾಮ ಕೃಷ್ಣಮೂರ್ತಿಯವರಿಗೆ ಹೊಟ್ಟೆಗೆ, ಬೆನ್ನಿಗೆ, ಕೈಗೆ ತೀವ್ರತರಹದ ಪೆಟ್ಟಾಗಿರುತ್ತದೆ. ನಂತರ ಅಲ್ಲಿದ್ದ ಗ್ರಾಮಸ್ಥರು ಅವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದರು. ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿಂದ ಮ್ಯಾಕ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಕೃಷ್ಣಮೂರ್ತಿಯವರು ಮೃತಪಟ್ಟಿರುತ್ತಾರೆ. ನಂತರ ಕೃಷ್ಣಮೂರ್ತಿಯವರ ಮೃತ ದೇಹವನ್ನು ತರೀಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪೋಸ್ಟ ಮಾರ್ಟಮ್ ನ್ನು ಮಾಡಿಸಿ, ಮೃತ ದೇಹವನ್ನು ಕುಟುಂಬಸ್ಥರಿಗೆ ಕೊಟ್ಟಿರುತ್ತಾರೆ. ಅದೇ ದಿನ ನಾನು ಲಕ್ಕವಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಕೃತ್ಯ ನಡೆದ ಸ್ಥಳಕ್ಕೆ ಪೋಲೀಸರು ಬಂದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **29-06-2021** ರಂದು ಬೆಳಿಗ್ಗೆ **11-00** ಗಂಟೆ ಸಮಯದಲ್ಲಿ ಕೃಷ್ಣಮೂರ್ತಿಯವರು ತಮ್ಮ ಬಾಬ್ತು ಕೆಎ **66** ಇ **7083** ಟಿ ವಿ ಎಸ್ ಬೈಕಿನಲ್ಲಿ ತೋಟಕ್ಕೆ ಹೋಗಲೇಂದು ರಂಗೇನಹಳ್ಳಿ ಕಡೆಗೆ ಹೋಗುತ್ತಿರುವಾಗ ಎದುರಿನಿಂದ ಬಂದ ಕೆಎ **55 1620** ರ ಕೃಷ್ಣ ಬಸ್ ಚಾಲಕ ಬಸ್ಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೃಷ್ಣಮೂರ್ತಿಯವರು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ ಸದರಿ ಅಪಘಾತ ಪಡಿಸಿರುತ್ತಾರೆಂದರೆ ಸರಿ. ಸದರಿ ಅಪಘಾತಕ್ಕೆ ಚಾಲಕನ ನಿರ್ಲಕ್ಷತನವೇ ಕಾರಣ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀಮತಿ ಎಸ್ ಎಂ **ವಕೀಲರಿಂದ.**

ಘಟನೆ ಸಂಭವಿಸಿತು ಎಂದು ಹೇಳಿದ ದಿನದಂದೇ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ಅಪಘಾತವನ್ನು ನೀವು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ವಿಚಾರವನ್ನು ರಂಗೇನಹಳ್ಳಿಯ ಗ್ರಾಮಸ್ಥರು ತಿಳಿಸಿರುತ್ತಾರೆ. ಅವರ ಹೆಸರು ನನಗೆ ನೆನಪಿಲ್ಲ. ನೀವು ಯಾವುದೇ ಅಪಘಾತವನ್ನು ನೋಡದೇ ಇದ್ದರೂ ಬೇರೆಯವರು ಹೇಳಿದ ಹೇಳಿಕೆ ಮೆರೆಗೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಹೇಳಿಕೆಗೆ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಕೃಷ್ಣಮೂರ್ತಿಯವರು ನಿಮ್ಮ ಅಣ್ಣ ಆಗಿದ್ದು, ಪರಿಹಾರ ಪಡೆಯಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**